ಅ) *ಸರ್ಕಾರವು ಡಾ// ಸರೋಜಿನಿ ಮಹಿಷಿ ಸಮಿತಿಯ ಶಿಫಾರಸನ್ನು ಅಂಗೀಕರಿಸಿದೆಯೇ?*

ಆ) *ಹಾಗಿದ್ದಲ್ಲಿ ಭಾರತ ಸರ್ಕಾರದ ಅಧೀನದಲ್ಲಿರುವ ಸಾರ್ವಜನಿಕ ಉದ್ಯಮಗಳನ್ನು ಕನ್ನಡಿಗರಿಗೆ ಉದ್ಯೋಗ ಒದಗಿಸಲು ಏನು ಕ್ರಮ ಕೈಗೊಳ್ಳಲಾಗಿದೆ?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಡಾ॥ ಸರೋಜಿನಿ ಮಹಿಷಿ ಸಮಿತಿಯು ಸಲ್ಲಿಸಿದ್ದ ವರದಿಯಲ್ಲಿರುವ ಕೆಲವು ಶಿಫಾರಸುಗಳನ್ನು ಪರಿಶೀಲಿಸಲು ನೇಮಿಸಲಾಗಿದ್ದ ಸಚಿವ ಸಂಪುಟದ ಉಪಸಮಿತಿಯು ಮಾಡಿದ ಶಿಫಾರಸುಗಳನ್ನು ಸರ್ಕಾರವು ಅಂಗೀಕರಿಸಿದೆ.

ಆ) ಈ ದಿಸೆಯಲ್ಲಿ ಸೂಕ್ತ ನಿರ್ದೇಶನಗಳನ್ನು ನೀಡಲಾಗಿದೆ.

ಕೃಷಿ ಮೇಲ್ದಂಡೆ ಯೋಜನೆ

1089 - ಶ್ರೀ ಮನೋಹರ ಐನಾಪುರ (ಬಳ್ಳೊಳ್ಳಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೃಷ್ಣಾ ಮೇಲ್ದಂಡೆ ಯೋಜನೆಗೆ ಇಲ್ಲಿಯವರೆಗೆ ಸಿಬ್ಬಂದಿಯ ವೆಚ್ಚವನ್ನು ಹೊರತು ಪಡಿಸಿ ಮಾಡಲಾದ ವೆಚ್ಚ ಎಷ್ಟು, ಮತ್ತು ಸಿಬ್ಬಂದಿ ಇಂಜಿನಿಯರ್ ಗಳ ವಸತಿ ಗೃಹಗಳು ಹಾಗೂ ಕಛೇರಿ ಕಟ್ಟಡಗಳಿಗೆ ಮಾಡಲಾದ ವಚ್ಚ ಎಷ್ಟು?*

ಆ) *ಸಿಬ್ಬಂದಿ ವೆಚ್ಚವನ್ನು ಹೊರತು ಪಡಿಸಿ ಇಂಡಿ ಕಾಲುವೆ ವಿಭಾಗಕ್ಕೆ ಮಾಡಿದ ವೆಚ್ಚ ಎಷ್ಟು?*

ಇ) *ವಸತಿ ಗೃಹಗಳು ಮತ್ತು ಇತರ ಕಟ್ಟಡಗಳಿಗಾಗಿ ಮಾಡಲಾದ ವೆಚ್ಚ ಎಷ್ಟು?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) (i) 1991ರ ಜನವರಿ ಕೊನೆಯವರೆಗೆ ಕೃಷ್ಣಾ ಮೇಲ್ದಂಡೆ ಯೋಜನೆಗಾಗಿ ಸಿಬ್ಬಂದಿ ವೆಚ್ಚ ಹೊರತುಪಡಿಸಿ ಮಾಡಲಾದ ವೆಚ್ಚ 529.54 ಕೋಟಿ ರೂ.ಗಳು

(ii) ಸಿಬ್ಬಂದಿ ಇಂಜಿನಿಯರ್‌ಗಳ ವಸತಿ ಗೃಹಗಳು ಹಾಗೂ ಕಚೇರಿ ಕಟ್ಟಡಗಳಿಗಾಗಿ ಇದುವರೆಗೂ ಮಾಡಿದ ವೆಚ್ಚ 35.50 ಕೋಟಿ ರೂಪಾಯಿಗಳು.

ಆ) ಕಾಲುವೆ ವಲಯ ಸಂಖ್ಯೆ:2 ಪ್ರಾರಂಭವಾದಾಗಿನಿಂದ, ಅಂದರೆ 1.10.1986ರಿಂದ ಇಂಡಿ ಉಪ ಕಾಲುವೆ ಹಾಗೂ ಸಂಬಂಧಿಸಿದ ಕಾಮಗಾರಿಗಳ ನಿರ್ಮಾಣಕ್ಕಾಗಿ ಸಿಬ್ಬಂದಿ ವೆಚ್ಚ ಹೊರತುಪಡಿಸಿ ಮಾಡಲಾದ ವೆಚ್ಚ 47.67 ಕೋಟಿ ರೂ.ಗಳು

ಇ) ಇಂಡಿ ಉಪ ಕಾಲುವೆ ಹಾಗೂ ಸಂಬಂಧಿಸಿದ ಕಾಮಗಾರಿಗಳಿಗಾಗಿ ಬೇಕಾಗುವ ಸಿಬ್ಬಂದಿ ವಸತಿ ಗೃಹಗಳು ಮತ್ತು ಕಛೇರಿ ಕಟ್ಟಡಗಳ ನಿರ್ಮಾಣಕ್ಕಾಗಿ ಮಾಡಿದ ವೆಚ್ಚ 8.57 ಕೋಟಿ ರೂ.ಗಳು

ಬಿಜಾಪುರ ಜಿಲ್ಲೆಯಲ್ಲಿ ರೇಷ್ಮೆ ಕೃಷಿ ಬೆಳವಣಿಗೆ

1091 - ಶ್ರೀ ಮನೋಹರ ಐನಾಪುರ (ಬಳ್ಳೋಳ್ಳಿ) : ಮಾನ್ಯ ರೇಷ್ಮೆ ಖಾತೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬಿಜಾಪುರ ಜಿಲ್ಲೆ ಸದಾ ಬರಗಾಲ ಪ್ರದೇಶ ಎಂಬುದು ನಿಜವೇ?

2) ಹಾಗಾದರೆ ರೇಷ್ಮೆ ಕೃಷಿಯನ್ನು ಹೆಚ್ಚಿಸಲು ಬರಗಾಲ ಜಿಲ್ಲೆಯಾದ ಬೆಳಗಾಂನಲ್ಲಿ ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ವಿ. ಮುನಿಯಪ್ಪ (ರೇಷ್ಮೆ ರಾಜ್ಯ ಸಚಿವರು) :